ಮಲಯಾಳಂ ಮೂಲ: **ಷೀಬಾ ಇ.ಕೆ.**
ಕನ್ನಡಕ್ಕೆ: **ಪ್ರಭಾಕರನ್ ಕೆ.**

# ಟಚ್ ಸ್ಕ್ರೀನ್



ಹಾಗಾದರೆ ಎಲ್ಲವೂ ಒಂದು ಅನಿಸಿಕೆ ಮಾತ್ರವಾಗಿತ್ತೆ?... ಸುಮ್ಮನೆ ಸಮಾಧಾನಕ್ಕಾಗಿ ಗಿರಿಧರ ಮೊಬೈಲನ್ನು ಮತ್ತೊಮ್ಮೆ ಕಿವಿಯ ಹತ್ತಿರ ಹಿಡಿದುಕೊಂಡ. ಇಲ್ಲ, ಲೈನ್ ಕಟ್ಟಾಗಿಲ್ಲ. ಈಗಲೂ ಕೇಳಬಹುದು ಕುಲುಕುಲು ನಗು, ಮುಲುಗುವ ಶರೀರಗಳ ಉನ್ಮತ್ತ ಧ್ವನಿಗಳು. ಅದರ ನಡುವೆ ಅವಳ ಆಲಸ್ಯ ತುಂಬಿಕೊಂಡ ಶೇಲೆಯ ಮಾತುಗಳು... ಎಲ್ಲವನ್ನು ಮತ್ತೆ ಖಾತ್ರಿಪಡಿಸಿದವು.

ಬೆಳಗ್ಗೆ ಹೊರಡುವಾಗ ಅವಳ ಮುಖದ ಭಾವನೆ ಹೇಗಿತ್ತು...

ಬಹಳ ಇಷ್ಟವಾದ ತಿಂಡಿಯನ್ನು ಅವಳು ಬೆಳಗ್ಗೆ ತಯಾರಿಸಿದ್ದಳು. ಮೃದುವಾದ ಇಡ್ಲಿ ಜೊತೆಗೆ ಚಟ್ನಿ ಮತ್ತು ಸಾಂಬರ್. ತೆಂಗಿನಕಾಯಿ ಚಟ್ನಿಗಿಂತ ಕೆಂಪು ಈರುಳ್ಳಿ ಚಟ್ನಿ ಹೆಚ್ಚು ಇಷ್ಟವಾಗತ್ತೆ. ಅದನ್ನೇ ಅವಳು ಇವತ್ತು ಮಾಡಿದ್ದಳು. ತಿಂಡಿ ತಿಂದು ಬಾಯ್ ಹೇಳಿ ಹೊರಡುವಾಗ ಯಥಾಪ್ರಕಾರ ಅವಳ ಕೆನ್ನೆಯ ಮೇಲೆ ಮೆಲ್ಲನೆ ಒಮ್ಮೆ ಪ್ರೀತಿಯಿಂದ ತಟ್ಟಿದೆ. ಮನೆಯಿಂದ ಆಫೀಸಿಗೆ ಬಹಳ ದೂರ ಇಲ್ಲದಿದ್ದರೂ ರಸ್ತೆಯಲ್ಲಿ ವಾಹನಗಳ ದಟ್ಟಣೆಯಿಂದಾಗಿ ಮಧ್ಯಾಹ್ನದ ಊಟ ತೆಗೆದುಕೊಂಡು ಹೋಗುವ ಅಭ್ಯಾಸವಿತ್ತು. ಏನಾದರೂ ಬೇಕಿದ್ರೆ ಫೋನ್ ಮಾಡೂಂತ ಹೇಳಿ ಗೇಟನ್ನು ಹಾಕುವಾಗ ಅವಳು ತಲೆಯಾಡಿಸಿ ಎಂದಿನಂತೆ ನಗುವನ್ನು ತಂದುಕೊಂಡಳು. ಹದಿನಾಲ್ಕು ವರ್ಷಗಳ ದಾಂಪತ್ಯ ಜೀವನವನ್ನು ಬಹಳ ಆನಂದದಿಂದ ನಡೆಸಿಕೊಂಡು ಹೋದದ್ದು ನಿಷ್ಕಳಂಕವಾದ ಆ ನಗು ನೀಡುತ್ತಿದ್ದ ಚೈತನ್ಯವೆಂದು ಯಾವಾಗಲಾದರೊಮ್ಮೊಮ್ಮೆ ಮದ್ಯಪಾನ ಮಾಡಲು ಸೇರಿಕೊಂಡಾಗಲೆಲ್ಲ ಹೇಳುವ ಮಾತಾಗಿತ್ತು. ನಗರದ ಪ್ರತಿಷ್ಠಿತ ಶಾಲೆಯಲ್ಲಿ ಏಳನೆಯ ತರಗತಿ ಓದುತ್ತಿರುವ ಮಗಳು ದಿಯಾಳಿಗೆ ಸಿಗುತ್ತಾ ಇದ್ದದ್ದು ಆ ನಗುವಿನ ನಂತರದ ಸ್ಥಾನ.

ಹೀಗೆಲ್ಲ ಇದ್ದದ್ದು ಇದ್ದಕ್ಕಿದ್ದಂತೆ ಏನಾಗಿ ಹೋಯ್ತು...

ಮಧ್ಯಾಹ್ನದಿಂದ ಯಾಕೊ ಕಿವಿ ಹತ್ತಿರ ಭಯಂಕರ ನೋವು... ಯಾವಾಗಲೂ ಹೀಗೆ ಆಗಿರಲಿಲ್ಲ. ಅದಕ್ಕೇ ಇರಬೇಕು ತುಂಬ ಆಯಾಸ...

"ಸಾರ್... ನೀವು ಮನೆಗೆ ಹೋಗಿ ಸ್ವಲ್ಪ ರೆಸ್ಟ್ ತಗೋಳಿ... ಬಿಸಿಲು ಹೆಚ್ಚಾಗಿರೋದ್ರಿಂದ ನಿದ್ರೆ ಸರಿಯಾಗಿ ಮಾಡದೆ ಕೆಲವೊಮ್ಮೆ ಈ ರೀತಿ ಆಗತ್ತೆ..."

ಪಕ್ಕದ ಕುರ್ಚಿಯಲ್ಲಿ ಕುಳಿತಿದ್ದ ಲತಿಕಾ ಹೇಳಿದಳು. ಮಧ್ಯಾಹ್ನ ಊಟ ಮಾಡೋದಿಕ್ಕೆ ಆಗಲಿಲ್ಲ. ವಾಂತಿ ಬರೋ ತರಹ ಕಹಿಮುಖ. ಎದೆಯಲ್ಲೇನೊ ಭಾರ. ತುಂಬಾನೆ ಆಯಾಸ...